**ದಿನಾಂಕ 08.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.**

ನನ್ನ ಮುಖ್ಯ ವಿಚಾರಣಾ ಸಾಕ್ಷ್ಯವನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಯಿಸಿ ರುಜು ಮಾಡಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿವೆ.

ಆಧಾರ್ ಕಾರ್ಡಿನ ನೋಟರಿ ಪ್ರತಿ(ಮೂಲ ದಾಖಲಾತಿಯೊಂದಿಗೆ ಹೋಲಿಕೆ ಮಾಡಿ ಮೂಲ ದಾಖಲಾತಿಯನ್ನು ಹಿಂದಿರುಗಿಸಲಾಯಿತು)ಯನ್ನು **ನಿಪಿ 12** ಎಂದು ಗುರುತಿಸಲಾಯಿತು. (ಹೇಳಿಕೆಯ ನೆರಳಚ್ಚು ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಶಾನೆಯನ್ನಾಗಿ ಗರುತಿಸಿರುವುದಿಲ್ಲ).

1ನೇ ಎದುರುದಾರರ ಪರ ಮಾನ್ಯ ವಕೀಲರು ಪ್ರತಿವಾದ ಪತ್ರ ಸಲ್ಲಿಸದಿರುವುದರಿಂದ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಮಾನ್ಯ ವಕೀಲರಿಂದ.**

ಅಪಘಾತವಾದ ಸ್ಥಳಕ್ಕೂ, ನಮ್ಮ ಮನೆಗೂ ಸುಮಾರು 100ಮೀಟರ್ ಅಂತರ ಇದೆ. ಅಪಘಾತವಾದ ಸಂದರ್ಭದಲ್ಲಿ ನಾನು ವ್ಯವಸಾಯ ವೃತ್ತಿಯನ್ನು ಮಾಡುತ್ತಿದ್ದೆ. ಅಪಘಾತವಾದ ಸಮಯದದಂದು ನಾನು ಸಂಜೆ ನಡೆದುಕೊಂಡು ಬಂದು ಡೈರಿಯ ಬಳಿ ನಿಂತಿದ್ದೆನು. ಸದರಿ ಸ್ಥಳದಲ್ಲಿ ಸಿಸಿ ಕ್ಯಾಮರಾ ಅಳವಡಿಸಿರುವುದಿಲ್ಲ. ಸದರಿ ಸ್ಥಳ ಜನಗಳು ಓಡಾಡುವ ಸ್ಥಳ ಆಗಿದ್ದು, ಆದರೆ ಅಪಘಾತವಾದ ಸಂದರ್ಭದಲ್ಲಿ ಜನ ಸಾಕಷ್ಟು ಇರಲಿಲ್ಲ. ಅರ್ಜಿದಾರರು ನಮ್ಮ ಊರಿನವರು, ಆದರೆ ಸಂಬಂಧಿ ಅಲ್ಲ. 1ನೇ ಎದುರುದಾರರು ಪಕ್ಕದ ಊರಿನವರು, ಆದರೆ

ಅಷ್ಟಾಗಿ ಪರಿಚಯ ಇಲ್ಲ. ಅಪಘಾತದ ಬಗ್ಗೆ ನಾನು ದೂರನ್ನು ನೀಡಿಲ್ಲ. ಅಪಘಾತವಾದ 67 ದಿನಗಳ ನಂತರ ದೂರು ದಾಖಲಾಗಿದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಪ್ರಥಮ ವರ್ತಮಾನ ವರದಿ ದಾಖಲಾದ ನಂತರ ಅಂದರೆ ಸುಮಾರು 2 ತಿಂಗಳ ನಂತರ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

ಗಾಯಾಳುವಿನೊಂದಿಗೆ ನಾನು ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಅಪಘಾತದ ಬಗ್ಗೆ ಆಸ್ಪತ್ರೆಯಲ್ಲಿ ಮಾಹಿತಿ ನೀಡಿರುತ್ತೇನೆ. ಆಗ ಯಾವ ವಾಹನ ಮತ್ತು ವಾಹನದ ಸಂಖ್ಯೆಯನ್ನು ತಿಳಿಸಿರುವುದಿಲ್ಲ. ಆ ಸಂದರ್ಭದಲ್ಲಿ ವೈದ್ಯರು ನನ್ನ ಸಹಿಯನ್ನು ಪಡೆದಿರುತ್ತಾರೆ. ತುರ್ತು ವಾಹನಕ್ಕೆ ನನ್ನ ಮೊಬೈಲ್ ನಿಂದ ಕರೆ ಮಾಡಿರುತ್ತೇನೆ. ವೈದ್ಯಕೀಯ ದಾಖಲಾತಿಗಳಲ್ಲಿ ನನ್ನ ಹೆಸರು ನಮೂದು ಇಲ್ಲ ಎಂದರೆ ಸಾಕ್ಷಿಯು ನಾನು ತಾಲ್ಲೂಕು ಆಸ್ಪತ್ರೆಗೆ ಮಾತ್ರ ಹೋಗಿದ್ದು, ನಂತರದ ಆಸ್ಪತ್ರೆಗಳಿಗೆ ಹೋಗಿಲ್ಲ ಎಂದು ನುಡಿಯುತ್ತಾರೆ. ಅಪಘಾತದ ಬಗ್ಗೆ ದೂರು ಕೊಡಲು ನನಗೆ ತೊಂದರೆ ಇತ್ತಾ ಎಂದರೆ ಆ ಬಗ್ಗೆ ನನಗೆ ಆಲೋಚನೆ ಬರಲಿಲ್ಲ ಮತ್ತು ನನ್ನ ಕೆಲಸಗಳು ಇದ್ದವು ಎಂದು ನುಡಿಯುತ್ತಾರೆ. ಹೇಳಿಕೆ ಪಡೆದಾಗ ನನಗೆ ವಾಹನ ಸಂಖ್ಯೆ ಮತ್ತು ಚಾಲಕನ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತವನ್ನು ನೋಡಿರುತ್ತೇನೆ ಎಂದು ಪೊಲೀಸರಿಗೆ ಯಾರು ಮಾಹಿತಿ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಅರ್ಜಿದಾರರು ಮತ್ತು ನಾನು ಒಂದೇ ಊರಿನವರಾದ ಕಾರಣ ಅಪಘಾತವನ್ನು ನೋಡದೇ ಇದ್ದರೂ ಸಹ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬೇರೆ ಯಾವುದೋ ಒಂದು ವಾಹನದಿಂದ

ಅಪಘಾತವಾಗಿದ್ದು, ಆಪಾದಿತ ವಾಹನದಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**
**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**